# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಕಾ.ನಿ.ಅ/ಕಾ.ಪೇ.ಉ.ವಿ/ಬೆಂ/ಪ್ರ.ದ.ಸ/
ಸಭೆಯ ನಡವಳಿ/ಸಂಖ್ಯೆ481/2020-21

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ : 23/12/2020

**ವಿಷಯ:-** ದಿನಾಂಕ. 19.12.2020ರಂದು ನಡೆದ ವಾರ್ಡ್ ಸಂಖ್ಯೆ. 120ರ ಸಮಿತಿ ಸಭೆಯ ನಡವಳಿಗಳು

**ಉಲ್ಲೇಖ:-** ಆಯುಕ್ತರ ಕಛೇರಿ ಆದೇಶ ಸಂಖ್ಯೆ. ಬಿ12(5)ಪಿ.ಆರ್/35/2020/21, ದಿ. 21.09.2020.

1. ವಾರ್ಡ್ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಮುನಿಲಕ್ಷ್ಮಿ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಇತರೆ ಸದಸ್ಯರು ಮತ್ತು ಕಾರ್ಯದರ್ಶಿಯವರ ಸಮ್ಮುಖದಲ್ಲಿ ಪ್ರಾರಂಭಿಸಲಾಯಿತು.
2. ಕೆ.ಪಿ ಅಗ್ರಹಾರ, ಕೇಶವನಗರ, 1ನೇ ಕ್ರಾಸ್, ಕನ್ಸರ್‌ವೆನ್ಸಿಯಲ್ಲಿ ಸಾರ್ವಜನಿಕರು ಕಸ ಮತ್ತು ಡೆಬ್ರೀಸ್‌ನ್ನು ಎಸೆದು ಸದರಿ ಜಾಗವು ಬ್ಲಾಕ್ ಸ್ಪಾಟ್ ಆಗಿ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದೆ ಹಾಗಾಗಿ ಸದರಿ ಜಾಗದಲ್ಲಿ ಕಸ ಮತ್ತು ಡೆಬ್ರೀಸ್‌ನ್ನು ಶೀಘ್ರವೇ ವಿಲೇವಾರಿ ಮಾಡುವುದಾಗಿ ಅಧಿಕಾರಿಗಳಿಗೆ ಸೂಚಿಸಲಾಯಿತು.
3. ಕಾಟನ್‌ಪೇಟೆಯ ಮುಖ್ಯರಸ್ತೆಯಲ್ಲಿ ಬೆಸ್ಕಾಂ ನವರು ಅಗೆದಿರುವ ಗುಂಡಿಗಳಿಗೆ ಸೂಕ್ತವಾದ ಮೇಲ್ಭಾಗದ ಮುಚ್ಚಳವನ್ನು ಅಳವಡಿಸದೇ ಇರುವುದರಿಂದ ವಾಹನಗ ಓಡಾಟಕ್ಕೆ ತೊಂದರೆಯಾಗುತ್ತಿದ್ದು ಸದರಿ ಗುಂಡಿಗಳಿಗೆ ಮೇಲ್ಭಾವಣಿಯನ್ನು ಅಳವಡಿಸಿ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.
4. ಗೂಡ್‌ಶೆಡ್ ರಸ್ತೆಯಲ್ಲಿ ಬಿದ್ದಿರುವ ಕಸವನ್ನು ತೆಗೆಯುವುದರಲ್ಲಿ ಆರೋಗ್ಯಾಧಿಕಾರಿಗಳು ಸರಿಯಾದ ಕ್ರಮ ವಹಿಸದೇ ಇರುವುದರಿಂದ ಸಭೆಯಲ್ಲಿ ಅಧ್ಯಕ್ಷರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಹಾಗಾಗಿ ಸದರಿ ಕೆಲಸವನ್ನು ಸೂಕ್ತ ಕ್ರಮವಹಿಸಿ ಕಸವನ್ನು ವಿಲೇವಾರಿ ಮಾಡುವುದಾಗಿ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.
5. ಕೆ.ಪಿ ಅಗ್ರಹಾರದ 9ನೇ ಡಿ ಕ್ರಾಸ್‌ನಲ್ಲಿ ಎಲೆಕ್ಟ್ರಿಕ್ ಪೋಲ್ ನಲ್ಲಿನ ವಿದ್ಯುತ್ ತಂತಿಯು ಸಾರ್ವಜನಿಕರ ಓಡಾಟಕ್ಕೆ ತೊಂದರೆಯುಂಟುಮಾಡುತ್ತಿದೆ ಹಾಗಾಗಿ ಸದರಿ ಜಾಗದಲ್ಲಿ ವಿದ್ಯುತ್ ತಂತಿಯನ್ನು ತೆಗೆಯಲು ಕೆ.ಇ.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.
6. ವಾರ್ಡಿನ ಪ್ರಮುಖ ಸ್ಥಳಗಳಲ್ಲಿ ಸೊಳ್ಳೆಗಳಿಗೆ ಸಮರ್ಪಕವಾಗಿ ಔಷಧಿ ಸಿಂಪಡಣೆ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಯಿತು.
7. ಕಾಟನ್‌ಪೇಟೆಯ ಕೆಲವು ಕ್ರಾಸ್‌ರಸ್ತೆಗಳಲ್ಲಿ ರಸ್ತೆಯು ದುರಸ್ಥಿಗೊಂಡಿದ್ದು ಸದರಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಅಧಿಕಾರಿಗಳಿಗೆ ಸೂಚಿಸಲಾಯಿತು.

Scanned with CamScanner

8. ಮಾನ್ಯ ನೋಡಲ್ ಅಧಿಕಾರಿಯವರು ಮುಂದಿನ ಸಭೆಯಲ್ಲಿ ವಾರ್ಡಿನ ಕುಂದು ಕೊರತೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಬೇಕೆಂದು ತಿಳಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**<u>ನಿರ್ಣಯ:-</u>**

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಮುಂದಿನ ಸಭೆಯೊಳಗಾಗಿ ಶೀಘ್ರವಾಗಿ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತ್ತು.

K. B. Saravan (signature)
ಕಾರ್ಯದರ್ಶಿ
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಕಾಟನ್‌ಪೇಟೆ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

K. Munilakshmi (signature)
ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ ಸಂಖ್ಯೆ. 120
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು :**

1. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕಾಟನ್‌ಪೇಟೆ ಉಪವಿಭಾಗ ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಕಛೇರಿ ಕಡತಕ್ಕೆ.

Scanned with CamScanner